**ಮಿಂಗ್ ಚಾನ್‌ವ್ರೊ ಅವರ ಎರಡು ಕವಿತೆಗಳು**

# ಹೊಕ್ಕಳಲಿ ಹೂವಿದೆ

ಆತ ಹೇಳಿದ,
'ಸಮುದ್ರಕ್ಕೆ ತಾಯಿಯ ಚಹರೆ ಇದೆ
ನೀಲ ಗರ್ಭದಲಿ
ಮುಳುಗೇಳುತ್ತವೆ ಜೀವರಾಶಿಗಳು'

ಆತ ಹೇಳಿದ,
'ನೆಲಕ್ಕಿದೆ ತಾಯ ಅಪ್ಪುಗೆಯ ಕಾವು
ಫಲವತ್ತಾದ ಮಣ್ಣ ಹೊದಿಕೆಯಡಿಯಿಂದ
ಸದ್ದಿಲ್ಲದೆ ಕುಡಿಯೊಡೆಯುತ್ತದೆ ಜೀವ'

ಆತ ಹೇಳಿದ,
'ಹರಿವ ತೊರೆಗಳು ಅಮ್ಮನ ಸಿರಿಮುಡಿಯಂತೆ
ಅಡ್ಡಾದಿಡ್ಡಿಯಾಗಿ ಬೆಟ್ಟಗುಡ್ಡಗಳ ಭುಜಹಾದು
ಮತ್ತಲ್ಲಿ ಜೀವ ಕುಪ್ಪಳಿಸಿ ಕುಣಿಯುತ್ತದೆ'.

ಆತ ಹೇಳಿದ,
'ಹಣ್ಣಿಗಿದೆ ತಾಯ ಅಪಾರ ನಿಷ್ಠೆ
ಸರ್ವವನೂ ಆವರಿಸುವುದು ಸಿಹಿ ತಿರುಳು
ತಿರುಳು ತಿಂದ ಮೇಲೆ
ಅಚಾನಕ್ಕಾಗಿ ಹೊರ ಸಿಡಿಯುವುದು ಜೀವ'.


ಆತ ಹೇಳಿದ,
'ಹೆಣ್ಣು ಹುಟ್ಟಿರುವುದೇ ತಾಯಿಯಾಗಲು.
ಹೊಟ್ಟೆಯ ಪ್ರತಿ ಉಬ್ಬು
ಚೈತನ್ಯ ತುಂಬಿದೊಂದು ಪರ್ವತ'.

ಗಂಡಸಿಗೆ ಜನ್ಮ ಕೊಟ್ಟ ಹೆಣ್ಣು
ಗೌರವಿಸಲ್ಪಡುತ್ತಾಳೆ ಕುಲಗೋತ್ರಗಳಲಿ

ಕೊನೆಗೂ ಆಕೆ ಬಾಯಿ ಬಿಟ್ಟಳು
'ತಾಯಿಗೊಬ್ಬ ತಾಯಿ ಬೇಕು
ತಾಯಿಗಿಂತಲೂ ದೊಡ್ಡದು ಹೆಣ್ತನ'

ಅವಳ ಹೊಕ್ಕುಳಲಿ ಹೂವಿದೆ
ಬತ್ತಿದ ಚಪ್ಪಟೆ ಹೊಟ್ಟೆಯಿಂದ
ಗಂಡು ದರ್ಪವ ಮೆಟ್ಟಿ ಅರಳುತ್ತದೆ
ಮೈತ್ರಿ ಮತ್ತು ಕಾರುಣ್ಯ ...

ಚಿತ್ರ: ಎಸ್.ಎಸ್. ಕಾಖಂಡಕಿ



# ಅದೃಶ್ಯ ವಿದಾಯ

ನೀನು ಹೊರಟು ನಿಂತಾಗ
ನಿನ್ನೊಡನೆ ಅದೃಶ್ಯಳಾಗಿ
ನಾನೂ ಬರುವೆ

ಆಹ್!
ಆ ಘಳಿಗೆಯನು ಹೇಗೆ ವರ್ಣಿಸಲಿ?

ಬಿಟ್ಟು ಹೋದ ಇಂಜನ್ನಿಗಾಗಿ
ವರುಷಾನುಗಟ್ಟಲೇ ಕಾಯುತ್ತಾ
ತುಕ್ಕು ಹಿಡಿದು ನಿಂತ
ರೈಲು ಬೋಗಿಗಳ ಹಾಗಲ್ಲ
ಆ ಅದೃಶ್ಯ ವಿದಾಯ

ನೋಡ ನೋಡುತ್ತಿದ್ದಂತೆ
ಯಾವ ಮಾಯದಲ್ಲೋ
ಕಂಪಿಸುತ್ತಾ ಕಂಪಿಸುತ್ತಾ
ಆವಿಯಾಗಿ ಹೋಗುವ
ಹುಲ್ಲು ದಳದ ಮೇಲಿನ ಇಬ್ಬನಿ!